# ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ

ಸಿಸಿ ನಂ ಃ 2389/2023

ಸಿಡಬ್ಲು ಃ 1

ಪಿಡಬ್ಲು ಃ 1

**ಹೆಸರು** ಃ ಸಂತೋಷ ಸಿದ್ದಪ್ಪ ಸಂಬಳಗಿ

**ವಯಾ** ಃ 32 ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಇಂಗಳಿ ತಾಃ ಹುಕ್ಕೇರಿ

**(ದಿನಾಂಕಃ 10-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಮೃತ ಸಿದ್ದಪ್ಪ ನನ್ನ ತಂದೆ . ದಿನಾಂಕ 0704-2023 ರಂದು ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆ ಕುದುರೆ ಶರತ್ತು ನೋಡಲು ನನ್ನ ತಂದೆ ಬೆಳಗಿನ 10 ಗಂಟೆಗೆ ಹೋಗಿದ್ದರು . ಆಗ ನಾನು ಹೊಲಕ್ಕೆ ಹೋಗಿದ್ದೆ. ಆಗ ಯಾರೋ ನನಗೆ ಬೆಳಗಿನ 10-30 ಗಂಟೆಗೆ ಫೋನ ಮಾಡಿ ನನ್ನ ತಂದೆಗೆ ಹೊಸೂರು ರೋಡಿನಲ್ಲಿ ಅಪಘಾತ ಆಗಿದೆ ಎಂದು ಹೇಳಿದರು. ಅಲ್ಲಿ ಇದ್ದವರು ನನ್ನ ತಂದೆಯವರನ್ನು ಘಟಪ್ರಭಾದ ಜೆ ಜೆ ದವಾಖಾನೆಗೆ ಕರೆದುಕೂಂಡು ಹೋಗಿದ್ದರು. ನಾನು ಹಿಂದೆ ಮೋಟಾರ ಬೈಕನಲ್ಲಿ ಹೋದೆ. ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ವಿಜಯಾ ಆಸ್ಪತೆಗೆ ಕರೆದುಕೊಂಡು ಹೋಗಿದ್ದರು. ಅದೇ ದಿನ ರಾತ್ರಿ ನನ್ನ ತಂದೆ ಆಸ್ಪತ್ರೆಯಲ್ಲಿ ತೀರಿಕೊಂಡರು. ಇಷ್ಟು ಬಿಟ್ಟು ಬೇರೆ ವಿಚಾರ ನನಗೆ ಗೊತ್ತಿಲ್ಲ.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

ದಿನಾಂಕ 07-04-2023 ರಂದು ನಮ್ಮ ಊರಿನಲ್ಲಿ ಹನುಮಂತ ದೇವರ ಜಾತ್ರೆಯ ಕಾರಣ ನನ್ನ ತಂದೆ ಹಾಗೂ ಚಾಸಾ-1 ಹಾಗೂ ಚಾಸಾ-7 ಹಾಗೂ ಇತರರು ಕೂಡಿ ಇಂಗಳಿ ಹೊಸೂರು

ರೋಡಿನಲ್ಲಿ ರಸ್ತೆ ಬಿಟ್ಟು ದಂಡೆಯಲ್ಲಿ ನಿಂತಿದ್ದಾಗ ಒಬ್ಬ ಮೋಟಾರ ಸೈಕಲ ಚಾಲಕ ಹೊಸೂರು ಕಡೆಯಿಂದ ಇಂಗಳಿ ಕಡೆಗೆ ಬಂದು ನನ್ನ ತಂದೆಗೆ ಡಿಕ್ಕಿ ಹೊಡಿಸಿದ ವಿಚಾರವನ್ನು ನನಗೆ ಚಾಸಾ-6 ರವರು ಫೋನನಲ್ಲಿ ತಿಳಿಸಿದರು ಎಂದರೆ ನನಗೆ ನೆನಪಿಲ್ಲ. ಸದರಿ ಮಾಟಾರ ಸೈಕಲ ನಂ. ಕೆಎ 22 ಇಎಫ್ 4102 ಇದ್ದು ಅದನ್ನು ಹೊಡೆಯುತ್ತಿದ್ದವನಿಗೆ ಮುಖಕ್ಕೆ ಪೆಟ್ಟಾಗಿತ್ತು ಹಾಗೂ ಹಿಂದೆ ಕುಳಿತವನಿಗೆ ಯಾವುದೇ ಪೆಟ್ಟಾಗಿರಲಿಲ್ಲ ಹಾಗೂ ಅವರು ಅಪಘಾತ ಪಡಿಸಿ ಗಾಡಿ ಬಿಟ್ಟು ಓಡಿ ಹೋದರು ಎಂದು ನನಗೆ ಚಾಸಾ-6 ರವರು ಫೋನನಲ್ಲಿ ತಿಳಿಸಿದರು ಎಂದರೆ ನನಗೆ ನೆನಪಿಲ್ಲ. ನನ್ನ ತಂದೆ ದಿನಾಂಕ 08-04-2023 ರದು ಸಂಜೆ 7-47 ಕ್ಕೆ ವಿಜಯಾ ಆಸ್ಪತ್ರೆ ಬೆಳಗಾವಿಯಲ್ಲಿ ಚಿಕಿತ್ಸೆ ಫಲಿಸದೇ ತೀರಿಕೊಂಡರು ಎಂದರೆ ನಿಜ . ಸದರಿ ಅಪಘಾತ ಆರೊಪಿತನ ಅತಿ ವೇಗ ಮತ್ತು ನಿಷ್ಕಾಳಜಿತನದ ಚಾಲನೆಯಿಂದ ಮತ್ತು ಆತನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ಪೋಲಿಸರಿಗೆ ದೂರು ಕೊಟ್ಟಿದ್ದೆ ಎಂದರೆ ನಿಜ . ದೂರನ್ನು ನಿ.ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು ನಾನು ಹೇಳಿದಂತೆ ಚಾಸಾ-11 ಇವರು ಬರೆದರು ಎಂದರೆ ನನಗೆ ಗೊತ್ತಿಲ್ಲ.

ಆ ದಿನ ವಿಜಯ ಆಸ್ಪತ್ರೆಯಲ್ಲಿ ನನ್ನ ತಂದೆಯ ಶವ ಪಂಚನಾಮೆ ಕಾಲಕ್ಕೆ ನಾನು ಹಾಜರ ಇದ್ದು ಅಲ್ಲಿ ಪೋಲಿಸರು ಮಾಡಿದ ಪಂಚನಾಮೆ ಮತ್ತು ಫೋಟೊದಲ್ಲಿ ಕಾಣುತ್ತಿದ್ದೇನೆ ಎಂದರೆ ನಿಜ . ಶವ ಪಂಚನಾಮೆ ನಿ.ಪಿ-2 ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಫೋಟೊ ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು. ಅಪಘಾತ ಸ್ಥಳದಲ್ಲಿ ಪೋಲಿಸರು ನಾನು ಸ್ದ.,ಳ ತೋರಿಸಿದ ಮೇರೆಗೆ ಸ್ಥಳ ಪಂಚನಾಮೆ ಮಾಡಿ, ನಕಾಶೆ ತೆಗೆದು ,ಅಲ್ಲಿ ಫೋಟೊ ತೆಗೆದರು ಎಂದರೆ ನಿಜ . ಸ್ಥಳ ಪಂಚನಾಮೆಯನ್ನು ನಿ.ಪಿ-5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-5(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಫೋಟೊ ನಿ.ಪಿ-7 ಎಂದು ಗುರುತಿಸಲಾಯಿತು. ಹಾಗೂ ಆ ದಿನ ಸಂಜೆ 4-30 ಕ್ಕೆ ಪೋಲಿಸರು ಪೋಲಿಸ ಠಾಣೆಯಲ್ಲಿದ್ದಂತಹ ಅಪಘಾತ ಪಡಿಸಿದ ಮೋಟಾರ ಸೈಕಲನ ಪಂಚನಾಮೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಂದಭರ್ದಲ್ಲಿ ನಾನು ವಾಹನ ತಡೆ ಪಂಚನಾಮೆಗೆ ಸಹಿ ಮಾಡಿದೆ ಎಂದರೆ ನಿಜ . ಸದರಿ ವಾಹನ ತಡೆ ಪಂಚನಾಮೆಯನ್ನು ನಿ.ಪಿ-8 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದಂತಹ 4 ಫೋಟೊಗಳನ್ನು ನಿ.ಪಿ-9 ರಿಂದ 12 ಎಂದು ಗುರುತಿಸಲಾಯಿತು.

ದಿನಾಂಕ **21-4-2023** ರಂದು ಪೋಲಿಸರು ಅಪಘಾತಪಡಿಸಿದಂತಹ ಆರೋಪಿತರನ್ನು ತೋರಿಸಿ ಅಲ್ಲಿ ನನ್ನ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ.

ಈಗ ನಾನು ಮತ್ತು ಆರೋಪಿತರು ರಾಜಿ ಆಗಿದ್ದೇವೆ ಎಂದರೆ ನಿಜ. ಆ ಕಾರಣಕ್ಕೆ ಎಲ್ಲಾ ಸಂಗತಿ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಎಸ್ ಎನ್ ಡಿ ವಕೀಲರಿಂದ -

ಅಪಘಾತದ ಸ್ಥಳ ನಾನು ಪೋಲಿಸರಿಗೆ ತೋರಿಸಿಲ್ಲ ಎಂದರೆ ನಿಜ . ಅಪಘಾತದ ಸ್ಥಳ ಪಂಚನಾಮೆಗೆ ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ನಿಜ. ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಕೋರಿಕೆ ಮೇರೆಗೆ ನಾನು ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ನಿಜ. ನನ್ನ ಸಮಕ್ಷಮದಲ್ಲಿ ಪೋಲಿಸರು ಯಾವುದೇ ಸ್ಕೇಚ್ಚನ್ನು ಮಾಡಿಲ್ಲ ಎಂದರೆ ನಿಜ. ಅಪಘಾತ ಸ್ದಳದ ಫೊಟೊ ಹಾಗೂ ವಾಹನದ ಫೊಟೊಗಳನ್ನು ಎಲ್ಲಿ ತೆಗೆದರು ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿ ನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**